ಕ್ಷರಗಳಿಂದ ಅಗ್ನಿಯ ಜ್ವಾಲೆಗಳು ಬರುತ್ತಿದ್ದನ್ನು ಸ್ಪಷ್ಟವಾಗಿ ಕಂಡಳು. ಮಂತ್ರವು ಅಪ್ರಯತ್ನಪೂರ್ವಕವಾಗಿ ಹೃದಯದಿಂದ ತಾನೇತಾನಾಗಿ ಚಿಮ್ಮುತ್ತಿರುವುದನ್ನು ಅನುಭವಿಸಿದ್ದಳು!

**ದೀಕ್ಷೆಯೆಂದರೇನು?** – ಭಗವನ್ನಾಮವನ್ನು ಗುರುವಿನಿಂದ ಪಡೆಯುವುದಕ್ಕೆ ದೀಕ್ಷೆ ಎನ್ನುತ್ತಾರೆ.'**ದೀಯತೇ ವಿಮಲಂ ಜ್ಞಾನಂ ಕ್ಷೀಯತೇ ಕರ್ಮ ವಾಸನಾ।**' ಯಾವುದು ಶುದ್ಧಜ್ಞಾನ ನೀಡುವುದೋ ಹಾಗೂ ಕರ್ಮ ಮತ್ತು ವಾಸನೆಗಳನ್ನು ನಾಶಗೊಳಿಸುವುದೋ ಅದೇ ದೀಕ್ಷೆ. ದೀಕ್ಷೆ ಎಂಬ ಸಂಸ್ಕೃತ ಮೂಲಶಬ್ದದ ಅರ್ಥ ಯಾವುದಾದರೂ ಕ್ರಿಯೆಯನ್ನು ಪ್ರಾರಂಭಿಸುವುದು ಅಥವಾ ಹಾಗೆ ಪ್ರಾರಂಭಿಸುವ ಸಂಕಲ್ಪ ಮಾಡುವುದು ಎಂದು. ಮಂತ್ರದೀಕ್ಷೆಯ ತಾತ್ಪರ್ಯ, ಆಧ್ಯಾತ್ಮಿಕ ಜೀವನದಲ್ಲಿ ಅದರ ಗುರುತ್ವ ಎಷ್ಟರಮಟ್ಟಿನದು ಎಂಬುದರ ಸ್ಪಷ್ಟ ಕಲ್ಪನೆಯಿಲ್ಲದೆ ಅನೇಕರು ದೀಕ್ಷೆ ಪಡೆಯಲಿಚ್ಛಿಸುತ್ತಾರೆ.

**ದೀಕ್ಷೆಯ ಬಗೆಗಳು:** ಅನೇಕ ರೀತಿಯ ದೀಕ್ಷೆಗಳ ಬಗ್ಗೆ ಶಾಸ್ತ್ರ ಉಲ್ಲೇಖಿಸುವುದು. ಆಗಮ ಶಾಸ್ತ್ರದಲ್ಲಿ ಶಾಂಭವೀ, ಶಾಕ್ತೀ ಮತ್ತು ಮಾಂತ್ರೀ ದೀಕ್ಷೆಗಳ ವಿವರಣೆ ಇದೆ. ಶಾಂಭವೀ ದೀಕ್ಷೆಯಲ್ಲಿ ಸ್ಪರ್ಶದೀಕ್ಷಾ, ವಾಗ್ದೀಕ್ಷಾ ಹಾಗೂ ದೃಗ್ದೀಕ್ಷಾಗಳಿವೆ. ಗುರುವಿನ ಸ್ಪರ್ಶ, ಸಂಭಾಷಣೆ ಮತ್ತು ದರ್ಶನದ ಮೂಲಕವೇ ಜೀವನಿಗೆ ಹಠಾತ್ತನೆ ಜ್ಞಾನೋದಯವಾಗುವುದು. *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೨, ಪು.೧೩೫-೩೭)*

ಒಮ್ಮೆ ಶ್ರೀರಾಮಕೃಷ್ಣರು ತಮ್ಮ ನೇರ ಶಿಷ್ಯ ನಿರಂಜನನನ್ನು ಸ್ಪರ್ಶಿಸಿದ ಮಾತ್ರಕ್ಕೆ ಆತ ಮೂರು ಹಗಲು, ಮೂರು ರಾತ್ರಿ, ಒಂದೇ ಒಂದು ಕ್ಷಣ ಕಣ್ಣುಮುಚ್ಚದೆ, ನಿರಂತರ ನಾಮಸ್ಮರಣೆಯಿಂದ ಅವನ ತುಟಿಗಳು ಅಲುಗಾಡುತ್ತಿದ್ದವು. ಅವನು ಅದ್ಭುತವಾದ ಬೆಳಕನ್ನು ನಿರಂತರ ದರ್ಶಿಸಿದನು! (*'Adbhutananda as we saw Him', p.355)*

ಶಾಂಭವೀ ದೀಕ್ಷೆಯಲ್ಲಿ ಆಚಾರ್ಯನ ಮನಸ್ಸಿನಲ್ಲಿ ದೀಕ್ಷೆ ನೀಡುತ್ತೇನೆಂದಾಗಲಿ ಹಾಗೂ ಶಿಷ್ಯನ ಮನದಲ್ಲಿ ಅದನ್ನು ಪಡೆಯುತ್ತೇನೆಂದಾಗಲೀ ಪೂರ್ವ ಸಂಕಲ್ಪವಿರುವುದಿಲ್ಲ. ಪರಸ್ಪರರನ್ನು ನೋಡಿದಾಕ್ಷಣವೇ ಆಚಾರ್ಯನಿಗೆ ಕರುಣೆ ಉದಯಿಸಿ ಕೃಪೆ ತೋರುವನು. ಇದರಿಂದಲೇ ಶಿಷ್ಯನ ಒಳಗೆ ಅದ್ವೈತ ವಸ್ತುವಿನ ಜ್ಞಾನವುಂಟಾಗಿ ಅವನಿಂದ ಶಿಷ್ಯತ್ವ ಸ್ವೀಕರಿಸುತ್ತಾನೆ. ಸಿದ್ಧಪುರುಷರು ಯಾವ ಬಾಹ್ಯ ಉಪಾಯವನ್ನೂ ಅವಲಂಬಿಸದೆ ಕೇವಲ ತಮ್ಮ ಆಧ್ಯಾತ್ಮಿಕ ಶಕ್ತಿಯ ಸಹಾಯದಿಂದಲೇ ಶಿಷ್ಯನಲ್ಲಿ ದಿವ್ಯಜ್ಞಾನವನ್ನುಂಟುಮಾಡಿದರೆ, ಅದನ್ನು 'ಶಾಕ್ತೀ ದೀಕ್ಷೆ' ಎನ್ನುತ್ತಾರೆ. ಮಾಂತ್ರೀ ದೀಕ್ಷೆಯ ಪ್ರಕಾರ ಗುರುವು ಮಂಡಲ, ಘಟಸ್ಥಾಪನೆ ಮತ್ತು ದೇವತಾರ್ಚನೆ ಇವುಗಳ ಮೂಲಕ ಮಂತ್ರವನ್ನು ಶಿಷ್ಯನ ಕಿವಿಯಲ್ಲಿ ಉಚ್ಚರಿಸುತ್ತಾನೆ.

ಇದಲ್ಲದೆ ಕ್ರಿಯಾವತೀ, ವರ್ಣಮಯೀ, ಕಲಾವತೀ, ವೇದಮಯೀ ಎಂಬ ದೀಕ್ಷಾವಿಧಿಗಳ ಉಲ್ಲೇಖನವೂ ಇದೆ ಶಾಸ್ತ್ರಗಳಲ್ಲಿ. ದಿವ್ಯಪುರುಷರು ಉಪದೇಶ, ದೀಕ್ಷೆ ಮುಂತಾದ ಶಾಸ್ತ್ರ ವಿಧಿ ನಿಯಮಗಳ ಪರಿಧಿಯ ಹೊರಗೆ ಇರುವರು. ಕಾಶೀಪುರದಲ್ಲಿ ಶ್ರೀರಾಮಕೃಷ್ಣರು ದೀರ್ಘವ್ಯಾಧಿಯಿಂದ ನರಳುತ್ತಿದ್ದಾಗ ತಮ್ಮ ಶಕ್ತಿಯ ಪ್ರಕಾಶವನ್ನು ನಿರ್ದೇಶಿಸಿ ಒಂದು ದಿನ ತಮ್ಮ ಶಿಷ್ಯರಿಗೆ ಹೀಗೆಂದರು: ''ಮಾತೆಯು ತೋರಿಸಿರುವಳು, ಈಗ ಇಲ್ಲಿ ಎಂಥಾ ಶಕ್ತಿ ಇದೆಯೆಂದರೆ ನಾನು ಜನರನ್ನು ಸ್ಪರ್ಶಿಸಬೇಕಾಗಿಯೂ ಇಲ್ಲ. ನಾನು ನಿಮಗೆ ಅವರನ್ನು ಸ್ಪರ್ಶಿಸಲು ಹೇಳುತ್ತೇನೆ. ನಿಮ್ಮ ಸ್ಪರ್ಶದಿಂದಲೇ ಅವರ ಚೈತನ್ಯ ಜಾಗೃತವಾಗುವುದು. ತಾಯಿಯೆ ಈಗ ಇದನ್ನು (ದೇಹವನ್ನು) ಗುಣಪಡಿಸಿದರೆ ಎಷ್ಟೊಂದು ಜನ ಬಂದು ಮುತ್ತುತ್ತಾರೆಂದರೆ ನಿಮಗೆ ಆ ಜನಜಂಗುಳಿಯನ್ನು ಹೊರಗೆ ತಳ್ಳಲು ಸಾಧ್ಯವೇ ಆಗುವುದಿಲ್ಲ. ನೀವು ಎಷ್ಟು ಕಷ್ಟಪಡಬೇಕಾಗುವುದೆಂದರೆ ನಿಮ್ಮ ದೇಹದ ನೋವನ್ನು ಗುಣಪಡಿಸಿಕೊಳ್ಳಲು ಔಷಧಿ ತೆಗೆದುಕೊಳ್ಳಬೇಕಾಗುತ್ತದೆ. *(ಲೀಲಾಪ್ರಸಂಗ, ಭಾಗ ೨, ಪು. ೧೩೭)*

**ಉಪಸಂಹಾರ:** ''ನಾಮದಲ್ಲಿ ಒಳ್ಳೇ ಮಾಹಾತ್ಮ್ಯವಿರುವುದೇನೋ ನಿಜ, ಆದರೆ ಅನುರಾಗವಿಲ್ಲದಿದ್ದರೆ ಏನು ದೊರೆಯುತ್ತದೆ? ಭಗವಂತನಿಗಾಗಿ ಪ್ರಾಣ ಸುಮ್ಮನೆ ವ್ಯಾಕುಲಪಡಬೇಕು'' *(ವಚನವೇದ, ಸಂ ೧, ಪು. ೧೪೬)* ಎಂಬ ಶ್ರೀರಾಮಕೃಷ್ಣರ ಎಚ್ಚರಿಕೆಯ ಧ್ವನಿಯನ್ನು ನಾವು ಕೇಳಲೇಬೇಕು. ವ್ಯಾಕುಲತೆ ಪಡೆಯುವ ಉಪಾಯವನ್ನು ಅವರೇ ತಿಳಿಸಿದ್ದಾರೆ: ''ಭಗವನ್ನಾಮೋಚ್ಚಾರಣೆಯನ್ನೂ ಮಾಡಿ; ಜೊತೆಗೆ ಪ್ರಾರ್ಥಿಸಿಕೊಳ್ಳಿ: ಈ ಎರಡು ದಿನದ ಬಾಳಿನಲ್ಲಿ ಹಣ, ಕೀರ್ತಿ, ದೇಹಸುಖ ಇವುಗಳ ಮೇಲಿನ ಆಸಕ್ತಿ ದಿನದಿನಕ್ಕೂ ಕಡಿಮೆಯಾಗುತ್ತಾ ಬರುವಂತೆ ಕರುಣಿಸಬೇಕೆಂದು.''

*(ವಚನವೇದ, ಸಂ ೧, ಪು. ೧೪೬)*

ಏಕೆಂದರೆ ಭಗವನ್ನಾಮೋಚ್ಚಾರಣೆಯಿಂದ ಒಮ್ಮೆ ಶುದ್ಧನಾದರೂ ಮನುಷ್ಯನ ಮನಸ್ಸು ಎಷ್ಟು ದುರ್ಬಲವೆಂದರೆ ಮತ್ತೆ ಪಾಪಕಾರ್ಯಗಳಲ್ಲಿ ಮುಳುಗಿಬಿಡುತ್ತಾನೆ. ಸಾಧನೆಯ ಪಥದಲ್ಲಿ ಎಷ್ಟೇ ಎಚ್ಚರಿಕೆಯಿಂದ ನಡೆಯುತ್ತಿದ್ದರೂ ಮುಗ್ಗರಿಸಿ ಬೀಳುವುದು, ಎಡರುವುದು, ಗಾಯಗೊಳ್ಳುವುದು ಇದ್ದೇ ಇರುತ್ತದೆ. ಸುದೃಢ ಸಂಕಲ್ಪ ಮತ್ತು ವಿಶ್ವಾಸ ಆವಶ್ಯಕ. ಅನೇಕಾನೇಕ ಜನ್ಮಗಳನ್ನು ತೆತ್ತುಕೊಳ್ಳುವ ಅಮೂಲ್ಯ ವಸ್ತುವಿಗಾಗಿ ಅರಸುತ್ತಿರುವೆವು ಎಂಬುದನ್ನು ಮರೆಯಬಾರದು. '**ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್ ಕವಯೋ ವದಂತಿ**' *(ಕಠೋಪನಿಷತ್, ೧.೩.೪)* 'ಈ ಪಥವು ಅತ್ಯಂತ ದುರ್ಗಮ, ಕತ್ತಿಯ ಅಲುಗಿನಂತೆ ಹರಿತವಾದದ್ದು ಎಂದು ಜ್ಞಾನಿಗಳು ಹೇಳುತ್ತಾರೆ.' ಇಂತಹ ಕತ್ತಿಯ ಅಲುಗಿನ ಮೇಲೆ ದುರ್ಬಲ ಮನಸ್ಸಿನ ನಾವು ನಡೆಯುವಾಗ...?

ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಅದ್ಭುತಾನಂದರ ಈ ಪ್ರಾರ್ಥನೆಯನ್ನು ಪ್ರತಿದಿನವೂ ಹೃತ್ಪೂರ್ವಕವಾಗಿ ಸ್ಮರಿಸುತ್ತಾ ಭಗವಂತನ ನಾಮದಲ್ಲಿ ಅಭಿರುಚಿ, ಅನುರಾಗಗಳನ್ನು ವೃದ್ಧಿಗೊಳಿಸುತ್ತಾ, ಆಧ್ಯಾತ್ಮಿಕ ಪಥದಲ್ಲಿ ದೃಢ ಹೆಜ್ಜೆಗಳನ್ನು ಇಡುತ್ತಾ ಅದಮ್ಯ ಉತ್ಸಾಹ, ಶಕ್ತಿಗಳೊಂದಿಗೆ ಹೋರಾಡೋಣ :

''ಹೇ ಭಗವಂತನೆ, ನಿನ್ನ ಹೆಸರನ್ನು ನಾವು ಮರೆಯದಂತಾಗಲಿ. ನಾನು ನಿನಗೆ ಶರಣಾಗಿರುವೆ. ನಿನ್ನ ಕಾರ್ಯದಲ್ಲಿ ನನ್ನನ್ನು ತೊಡಗಿಸು. ನನ್ನ ಎಲ್ಲ ವಿಘ್ನಗಳನ್ನೂ ದೂರ ಮಾಡು. ಎಲ್ಲ ಸಂಶಯಗಳನ್ನು ನಾಶಗೊಳಿಸು. ನೀನೇ ನನ್ನ ಸ್ವಾಮಿ, ನನ್ನ ಗುರು, ನನ್ನ ತಂದೆತಾಯಿ. ನಾನು ನಿನ್ನ ಸಂತಾನ. ನನಗೆ ಯಾವುದು ಕಲ್ಯಾಣಕರವೋ ಆ ಮಾರ್ಗದಲ್ಲಿ ನನ್ನನ್ನು ನಡೆಸಿಕೊಂಡು ಹೋಗು, ನನ್ನ ಮೂಲಕ ನಿನ್ನ ಎಲ್ಲ ಕೆಲಸಗಳನ್ನು ಮಾಡಿಸಿಕೋ. ಆದರೆ ನಿನ್ನ ಮಾಯೆಯಿಂದ ನನ್ನನ್ನು ಮುಗ್ಧಗೊಳಿಸಬೇಡ. ಪ್ರಭು! ನಾನಾದರೂ ನಿನ್ನನ್ನು ನೋಡಿಲ್ಲ, ನಿನ್ನ ಹೆಸರನ್ನು ಮಾತ್ರ ಕೇಳಿದ್ದೇನೆ. ನನ್ನ ಮೇಲೆ ದಯೆ ತೋರಿ ನನ್ನನ್ನು ನಿನ್ನವನನ್ನಾಗಿ ಮಾಡಿಕೋ.'' *(ಅದ್ಭುತವಾಣಿ , ಪು. ೭೫)*